# ತವರಿನಲ್ಲಿ ಕರಗತವಾದ ಮಸಾಜ್ ಥೆರಪಿ

ಭಾರತ ಕೊಳಕು ಮತ್ತು ಕಸ, ದೂಳಿನ ದೇಶ. ಜನರು ಸಾರ್ವಜನಿಕ ಸ್ಥಳಗಳಲ್ಲಿ ಕಸವನ್ನೆಸೆಯುತ್ತಾರೆ, ಉಗುಳುತ್ತಾರೆ, ಮೂತ್ರ ವಿಸರ್ಜನೆ ಮಾಡುತ್ತಾರೆ, ಇಲ್ಲಿ ಭ್ರಷ್ಟಾಚಾರವಿದೆ, ಗಲಾಟೆಯಿದೆ. ಬಹುತೇಕ ವ್ಯಾಪಾರಿಗಳು ಮತ್ತು ಸೇವಾಕೇಂದ್ರಗಳನ್ನು ನಂಬುವಂತಿಲ್ಲ. ಅವರು ಸಮಯಕ್ಕೆ ಬರುವುದಿಲ್ಲ, ಅವರ ಕೆಲಸಗಳಲ್ಲಿ ಗುಣವಂತಿಕೆಯ ಕೊರತೆಯಿರುತ್ತದೆ. ಕೆಲವರು ಹೇಳದೆ ಕೇಳದೆ ಕಣ್ಮರೆಯಾಗುತ್ತಾರೆ. ಈ ವಿಷಯಗಳು ವಾಸ್ತವವಾಗಿಯೂ ಚಿಂತೆಗೆ ಕಾರಣವಾಗುತ್ತವೆ. ಈ ವಿಷಯಗಳಿಂದಾಗಿಯೇ ಜನ ತಾವು ಮರಳಿ ಬಂದ ದೇಶಗಳಿಗೆ ಹೋಗುತ್ತಾರೆ. ತಾವು ಅಲ್ಲಿಯ ಪಿ.ಆರ್. (ಪರ್ಮನೆಂಟ್ ರೆಸಿಡೆಂಟ್‌ಶಿಪ್) ಅಥವಾ ನಾಗರಿಕತೆಯನ್ನು ಪಡೆದು ಬರಬೇಕಿತ್ತು, ಆಗ ಮರಳಿ ಹೋಗುವ ಅವಕಾಶವಿರುತ್ತಿತ್ತು ಎಂದು ಕೆಲವರು ವಿಷಾದಿಸುತ್ತಾರೆ.

ಇಂಥ ಚರ್ಚೆಯ ವೇಳೆಯಲ್ಲಿ ನಾವು ತಟಸ್ಥರಾಗಿರುತ್ತಿದ್ದೆವು, ಏಕೆಂದರೆ ನಮಗೆ, ನಾವಿಲ್ಲಿರುವುದು ಕೇವಲ ಎರಡು ವರ್ಷಗಳು ಮಾತ್ರ ಎಂಬುದರ ಅರಿವಿತ್ತು. ನಾವು ಮರಳಿ ಯೂರೋಪಿಗೆ ಹೋಗಲೇಬೇಕಿದೆ. ಭಾರತದ ವಿಷಯದಲ್ಲಿ ನನ್ನ ಸ್ವಂತ ಅಭಿಪ್ರಾಯ ಏನೇ ಇರಲಿ, ನಾನು ಭಾರತವನ್ನು ಅದೆಷ್ಟೇ ನನ್ನದು–ಪರರದು ಎಂದು ತಿಳಿದರೂ, ಇದು ನನ್ನ ಪತಿ ಮತ್ತು ಪುತ್ರನ ದೇಶವಲ್ಲ. ನಾನು ಅವರನ್ನು ಇಲ್ಲಿರಲು ಯಾವುದೇ ಪರಿಸ್ಥಿತಿಯಲ್ಲಿ ಬಾಧ್ಯಗೊಳಿಸಲು ಸಾಧ್ಯವಿರಲಿಲ್ಲ. ಹೀಗಾಗಿ ನಾನು, ಇಲ್ಲಿರುವುದನ್ನು ಸುಖವಾಗಿ ಅನುಭವಿಸುವುದು, ನಂತರ ಇಲ್ಲಿಂದ ಹೊರಟು ಹೋಗುವುದು ಎಂಬ ಸಿದ್ಧಾಂತಕ್ಕೆ ಬಂದೆ.

ಇಲ್ಲಿರುವ ಅನುಕೂಲಗಳು ಯೂರೋಪ್ ಅಥವಾ ಅಮೆರಿಕದಲ್ಲೂ ಇರಲಿಲ್ಲ. ಮನೆಯ ಸ್ವಚ್ಛತೆಗೆ ನೌಕರ, ಎರಡೂ ವೇಳೆ ಅಡುಗೆ ಮಾಡುವ ಕುಕ್, ಧೋಬಿ ಮನೆಗೆ ಬಂದು ಬಟ್ಟೆಗಳನ್ನು ತೆಗೆದುಕೊಂಡು ಹೋಗುತ್ತಿದ್ದ; ನಂತರ ಅವುಗಳನ್ನು ಸ್ವಚ್ಛ ಮಾಡಿ, ಇಸ್ತ್ರಿ ಮಾಡಿ ತರುತ್ತಿದ್ದ. ನೌಕರನಿಂದ ತರಕಾರಿಗಳನ್ನು ತರಿಸುತ್ತಿದ್ದೆ. ಅಂಗಡಿಯವರು ಮನೆಗೆ ದಿನಸಿಗಳನ್ನು ತಲುಪಿಸುತ್ತಿದ್ದರು. ಶಿಕ್ಷಣಕ್ಕೆ ಒಳ್ಳೆಯ ಅವಕಾಶಗಳಿದ್ದವು. ನೀಲ್ ತನ್ನ ಶಾಲೆಯ ಬಗ್ಗೆ ಖುಷಿಯಿಂದಿದ್ದ. ಬ್ಯೂಟಿ ಪಾರ್ಲರ್‌ಗಳಿದ್ದವು. ಚಮ್ಮಾರ, ಕ್ಷೌರಿಕ, ದರ್ಜಿ... ಎಲ್ಲರೂ ಇದ್ದರು. ವೈದ್ಯಕೀಯ ಸವಲತ್ತುಗಳು ತಕ್ಷಣ ಲಭಿಸುತ್ತಿದ್ದವು. ಒಂದೇ ದಿನದಲ್ಲಿ ಆರೋಗ್ಯಕ್ಕೆ ಸಂಬಂಧಿಸಿದ ಎಲ್ಲಾ ಟೆಸ್ಟ್‌ಗಳನ್ನು ಮಾಡಿಸಿಕೊಳ್ಳಬಹುದಿತ್ತು. ಯೂರೋಪಿನಂತೆ ತಿಂಗಳುಗಟ್ಟಲೆ ಕಾಯಬೇಕಿರಲಿಲ್ಲ. ನೆರೆಹೊರೆಯವರು ಸಹ ಪ್ರಾಮಾಣಿಕರಾಗಿದ್ದರು. ಹೀಗಿರುವಾಗ ಇನ್ನೇನು ತಾನೇ ಬೇಕು?

